

ರಾಯರ ಕೆರೆ ಮದಗ 2005ರಲ್ಲಿ.



ಬ್ರಹ್ಮಾವರದ ಬಳಿಯ 22 ಎಕರೆಯ ಬೃಹತ್ ಚಾಂತಾರು ಮದಗ

ಪಟ್ಟಣ. ಹೀಗಾಗಿ ಮೂಲೆಗುಂಪಾಗಿದ್ದ ಮಣ್ಣಪಳ್ಳ ಮತ್ತೆ ಅದ್ಭುತ ಜಲನಿಧಿಯಾಯಿತು. ಈ ಕಾಯಕಲ್ಪಕ್ಕೆಂದೇ ಎರಡು ಕೋಟಿ ರೂಪಾಯಿ ಹರಿದುಬಂದದ್ದರ ಹಿನ್ನೆಲೆ ಅದು.

## ಹಾಳುಬಿದ್ದ ಮದಗಗಳದೇ ಸಿಂಹಪಾಲು

ಜಿಲ್ಲೆಯ ಹಳ್ಳಿಗಳಲ್ಲಿ ಕಂಗೆಟ್ಟು ಸೋತಿರುವ, ಇನ್ನೇನು ಅತಿಕ್ರಮಣ, ವ್ಯಾಪಾರಿ ಆಸಕ್ತಿಗಳು ನುಂಗಲು ತಯಾರಾಗಿರುವ ನೂರಾರು ಮದಗಗಳಿವೆ. ಪಾಪ. ಊರ ಜನ ಮರೆತ ಈ ಮದಗಗಳಿಗೆ ಮಣ್ಣಪಳ್ಳದ ಭಾಗ್ಯ ಎಲ್ಲಿಂದ ಬರಬೇಕು?

ಬಾರ್ಕೂರಿನ ಜಲ ಕಾರ್ಯಕರ್ತ, ನಿವೃತ್ತ ಪ್ರಾಂಶುಪಾಲ ಬಿ. ಸೀತಾರಾಮ ಶೆಟ್ಟರಿಗೆ ಈಗ ವಯಸ್ಸು 80. 'ನಾಲ್ಕೈದು ಶತಮಾನಗಳ ಹಿಂದೆ ಬಾರ್ಕೂರನ್ನು ವಿಜಯನಗರದ ಅರಸರು ಆಳುತ್ತಿದ್ದರು. ಆಗ ಇಲ್ಲಿ ಬೇರೆಬೇರೆ ಕೇರಿಗಳು, ಆಯಾಯ ಕೇರಿಗೊಂದು ದೇವಸ್ಥಾನ, ಕೆರೆ ಇತ್ಯಾದಿ ನಿರ್ಮಿಸಿದ್ದರು. ಇಲ್ಲಿ ಇಂತಹ ಹತ್ತು ಕೆರೆಗಳಿವೆ. ಈ ಹತ್ತೂ ಕೆರೆಗಳಿಗೆ ನೀರುಣಿಸುತ್ತಿದ್ದುದು ಐದು ಕಿ.ಮೀ. ದೂರದ ಅಲ್ತಾರ್ ಮದಗ' ಎಂದು ನೆನೆಯುತ್ತಾರೆ ಸೀತಾರಾಮ ಶೆಟ್ಟಿ. 'ಯಡ್ತಾಡಿ ಪಂಚಾಯತಿನಲ್ಲಿ ಕಾಡು ಪ್ರದೇಶದಲ್ಲಿರುವ ಅಲ್ತಾರ್ ಮದಗ ಸುಮಾರು 15 ಎಕ್ರೆಯದಿತ್ತು. ಅದು ಈಗ ಹೂಳು ತುಂಬಿ ಅಕೇಸಿಯಾ ಹಿಂಡು ಬೆಳೆದು ಬಹುತೇಕ ಇಲ್ಲದಂತಾಗಿದೆ. ಅದರ ಹತ್ತಿರ ಇರುವ ನೂಜಿಕೆರೆಯಲ್ಲಿ ಸ್ವಲ್ಪ ನೀರು ತುಂಬಿಕೊಳ್ಳುತ್ತದೆ' ಎನ್ನುತ್ತಾರೆ.

ಬ್ರಹ್ಮಾವರದಿಂದ ಅನತಿ ದೂರದಲ್ಲಿದೆ ಆವರ್ಸೆ ಪಂಚಾಯತಿ. ಈ ಪಂಚಾಯತಿನಲ್ಲಿ ಹಾಲ್ತೋಡು ಮದಗ ಇದೆ. ಸುಮಾರು ಐದಾರು ಎಕ್ರೆಯಷ್ಟು ವಿಶಾಲವದು. ಬಹುಶಃ 80ರ ದಶಕಾರ್ಧದವರೆಗೂ ಈ ಮದಕದ ನೀರು ರಸ್ತೆ ಬದಿಯ ಕಣಿಯ ಮೂಲಕ ಹಿಲಿಯಾಣ ಶಾಲೆಯವರೆಗೂ ನಾಲ್ಕು ಕಿಲೋಮೀಟರ್ ದೂರ ಸಾಗುತ್ತಿತ್ತು. ದೀಪಾವಳಿಯವರೆಗೂ, ಭತ್ತದ ಎರಡನೆ ಬೆಳೆಗೂ ನೀರುಣಿಸುತ್ತಿತ್ತು. ಅದೂ ಚಿಲ್ಲರೆ ಜಾಗಕ್ಕಲ್ಲ – ಹೆಚ್ಚುಕಮ್ಮಿ ನೂರೆಕರೆಗೆ!

ಕಾಲ ಬದಲಾಗಿದೆ. ಭತ್ತದ ಕೃಷಿಯೂ ಇಳಿದಿಳಿದುಬಿಟ್ಟಿದೆ. ಎರಡನೇ ಬೆಳೆ ಮಾಡುವವರು ಇಲ್ಲವೆನ್ನುವಷ್ಟು ಕಡಿಮೆ. ಈಗ ಹಾಲ್ತೋಡು ಮದಗದಿಂದ ಇಷ್ಟು ದೂರ ನೀರು ಬರುತ್ತಿರುವುದು ಗೊತ್ತಿರುವವರೇ ಕಮ್ಮಿ. ಏಕೆಂದರೆ ಮದಗದಿಂದ ನೀರು ಹರಿದುಬರುತ್ತಿದ್ದ ಊರವರು 'ತೋಡು' ಎಂದೇ ಕರೆಯುವ ಕಣಿ ಪೂರ್ತಿ ಮುಚ್ಚಿಹೋಗಿದೆ. ಊರಿನ ಅನ್ನದ ಬೆಳೆಗೆ ಆಸರೆಯಾಗಿದ್ದ ಮದಗವೂ ಹೂಳು ತುಂಬಿ ಹಾಳುಬಿದ್ದಿದೆ!

## ಚಾಂತಾರಿನ ಅದ್ಭುತ

ದಾಖಲೆಗಳು ಹೇಳುತ್ತವೆ, 'ಉಡುಪಿ ಜಿಲ್ಲೆಯ ಅತಿ ದೊಡ್ಡ ಜಲಾಶಯ ಚಾಂತಾರು ಮದಗ. ಅದು 36 ಎಕರೆ ಇತ್ತು ಅಂತ'. ಇದು ಬ್ರಹ್ಮಾವರದಿಂದ ಐದು ಕಿ.ಮೀ. ದೂರದಲ್ಲಿದೆ. 'ಈಗ ಕೆರೆಯ ವ್ಯಾಪ್ತಿ ಇರುವುದು ಕೇವಲ 22 ಎಕರೆ. ಉಳಿದದ್ದು ಅತಿಕ್ರಮಣ ಆಗಿಬಿಟ್ಟಿದೆ' ಎನ್ನುತ್ತಾರೆ ಸ್ಥಳೀಯ ಕೃಷಿಕ ಎಸ್.ಸದಾನಂದ ನಾಯಕ್.

ಹಿಂದೆಲ್ಲಾ ಫೆಬ್ರುವರಿವರೆಗೆ ಮಾತ್ರ ನೀರು ನಿಲ್ಲುತ್ತಿದ್ದ ಈ ಮದಗದಲ್ಲಿ ಕಳೆದ ವರ್ಷದ ಬಿರುಬೇಸಗೆ ಕೊನೆಗೂ ಎರಡಡಿ ಆಳದ ನೀರಿತ್ತು. ಈ ಕಾರಣದಿಂದ ಸುತ್ತುಮುತ್ತಲಿನವರಿಗೆ